

ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

▶▶ ನನ್ನ ಮಗ ಈಗ ಐದನೇ ತರಗತಿ ಪ್ರವೇಶಿಸಲಿದ್ದಾನೆ. ಇಲ್ಲಿಯವರೆಗಿನ ಶಿಕ್ಷಣ ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಆಗಿತ್ತು. ಅವನಿಗೆ ಇಂಗ್ಲಿಷ್‌ನಲ್ಲಿ ಕಲಿಯುವುದು ಕಷ್ಟಕರ ಎನಿಸಿದೆ. ಗಣಿತವನ್ನಂತೂ ಕನ್ನಡದಲ್ಲಿ ಹೇಳಿದಾಗ ಬಹಳ ಬೇಗ ಅರ್ಥಮಾಡಿಕೊಳ್ಳುತ್ತಿದ್ದ. ಇಂಗ್ಲಿಷಿನಲ್ಲಿ ಕಲಿಸಿದ್ದನ್ನು ಮತ್ತೊಮ್ಮೆ ಮನೆಯಲ್ಲಿ (ಮನೆ ಭಾಷೆ) ಕನ್ನಡದಲ್ಲಿ ಕಲಿಸಿದಾಗ ಮಾತ್ರ ಆಸಕ್ತಿ ಇರುತ್ತಿತ್ತು. ಇದನ್ನೇ ಮುಂದುವರೆಸುವುದು ಇನ್ನು ಮುಂದೆ ಸಾಧ್ಯವಾಗದ ಮಾತು. ಏಕೆಂದರೆ, ಅವನು ಶಾಲೆಯಲ್ಲಿ ಕಲಿತದ್ದೆಲ್ಲವನ್ನೂ ಮನೆಯಲ್ಲಿ ಕಲಿಸಲು ಆಗುವುದಿಲ್ಲ. ನಮ್ಮ ಮುಂದಿರುವ ದಾರಿ ಎಂದರೆ ಕನ್ನಡ ಮಾಧ್ಯಮದಲ್ಲಿಯೇ ಅವನ ಶಿಕ್ಷಣವನ್ನು ಮುಂದುವರೆಸುವುದು. ಹೀಗೆ ಮಾಡುವುದರಿಂದ ಅವನ ಕಲಿಕೆ ಉತ್ತಮ ಆಗುವುದೇ? ಹಾಗೆಯೇ ಕನ್ನಡ ಮಾಧ್ಯಮದಲ್ಲಿಯೇ ಇದುವರೆವಿಗೂ ಕಲಿತ ಮಕ್ಕಳಿಗಿಂತ ಇವನ ಕಲಿಕೆಯ ಸಿದ್ಧತೆ ಹಿಂದಿದೆ ಎನ್ನುವುದು ನಮ್ಮ ಭಾವನೆ. ನಾವು ಇದುವರೆವಿಗೂ ಕನ್ನಡದಲ್ಲಿ ಹೇಳಿಕೊಟ್ಟಿದ್ದರ ಉದ್ದೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿ ಎನ್ನುವುದಷ್ಟೇ ಇತ್ತು. ಮುಂದೆ ಕನ್ನಡ ಭಾಷೆಯಲ್ಲಿಯೇ ಶಿಕ್ಷಣ ಮುಂದುವರೆಯುವುದರಿಂದ ಅವನ ಆಸಕ್ತಿ ಎಷ್ಟರ ಮಟ್ಟಿಗೆ ಇರುತ್ತದೆ ಎನ್ನುವ ಅಂದಾಜು ನಮಗಿಲ್ಲ. ಐದಾರು ವರ್ಷಗಳ ಕಾಲ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತ ಅವನಿಗೆ ಕನ್ನಡದಲ್ಲಿ ಕಲಿಸುವುದು ಕಷ್ಟವಾಗುವುದೇ? ಈ ಬಗ್ಗೆ ಅವನನ್ನು ಕೇಳಿದರೆ ಒಮ್ಮೆ ಕನ್ನಡದಲ್ಲಿ ಕಲಿಯುತ್ತೇನೆ ಎಂದರೆ, ಇನ್ನೊಮ್ಮೆ ಕಷ್ಟ ಎನ್ನುತ್ತಾನೆ. ಈಗ ನಾವೇ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಸೂಕ್ತ ಪರಿಹಾರ ಸೂಚಿಸುವರೆಂದು ನಂಬಿದ್ದೇನೆ.

-ರವೀಂದ್ರ, ಶಿವಮೊಗ್ಗ

ಮನೆಯ ಭಾಷೆಯಲ್ಲಿ ಆರಂಭಿಕ ಶಿಕ್ಷಣ ಇದ್ದಷ್ಟು ಉತ್ತಮ ಎನ್ನುವುದು ತಜ್ಞರ ಅಭಿಪ್ರಾಯ. ಅದೇನೆ ಇರಲಿ ಈಗ ನಿಮ್ಮ ಹುಡುಗನ ಕಲಿಕೆಯ ಆಸಕ್ತಿ, ಕಲಿಯುವ ಸಾಮರ್ಥ್ಯ, ಮತ್ತು ಅವನ ಭವಿಷ್ಯದ ಶಿಕ್ಷಣದ ದೃಷ್ಟಿಯಿಂದ ವಿಷಯವನ್ನು ಅವಲೋಕಿಸಬೇಕಾಗಿದೆ. ಇದುವರೆವಿಗೂ ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಕಲಿತ ಅವನಿಗೆ ಪರೀಕ್ಷೆಯ ಸಮಯದಲ್ಲಿ ಕನ್ನಡದಲ್ಲಿ ಕಲಿಸಿಕೊಟ್ಟು ಮುಂದಿನ ತರಗತಿಗೆ ಹೋಗುವಂತೆ ಮಾಡಿದ್ದೀರಿ. ಹೀಗಾಗಿಯೇ ಅವನಲ್ಲಿ ಕಲಿಯುವ ಆಸಕ್ತಿ ಉಳಿದಿದೆ ಎಂದುಕೊಳ್ಳೋಣ. ಅಂದರೆ, ಅವನಿಗೆ ಪರಿಚಯವಿರುವ ಭಾಷೆಯಲ್ಲಿ ವಿವರಿಸಿದರೆ ಕಲಿಯಬಲ್ಲ ಎನ್ನುವುದು. ಅಂದ ಮೇಲೆ ಕನ್ನಡ ಮಾಧ್ಯಮದಲ್ಲಿ ಓದಿದರೆ ಅಷ್ಟೇನು ಕಷ್ಟವಾಗಲಾರದು. ಏಕೆಂದರೆ ಯಾವುದೇ ವಿಷಯವನ್ನು ಕಲಿಯಲು ಬೇಕಾಗಿರುವುದು ಆಸಕ್ತಿ ಮತ್ತು ಕುತೂಹಲ. ಇವೆರಡು ಅವನಲ್ಲಿದೆ ಎನ್ನುವುದಂತೂ ಗೊತ್ತಾಗಿದೆ. ಈಗಿರುವ ಸಮಸ್ಯೆ ಎಂದರೆ, ಇಂಗ್ಲಿಷ್ ಮಾಧ್ಯಮದಲ್ಲಿ ವಿಷಯವನ್ನು ಕಲಿತಿದ್ದಾನೆ. ಮುಂದಿನ ದಿನಗಳಲ್ಲಿ ಎಲ್ಲ ವಿಷಯಗಳನ್ನು ಕನ್ನಡದಲ್ಲಿಯೇ ಕಲಿಯುವುದಕ್ಕೆ ಅವನಲ್ಲಿ ಸಿದ್ಧತೆ ಇಲ್ಲ ಎನ್ನುವುದು. ನಿಮ್ಮ ಹುಡುಗನಿಗೆ ಈಗಾಗಲೇ ಕನ್ನಡದಲ್ಲಿ ಪಠ್ಯದ ವಿಷಯಗಳನ್ನು ಪರಿಚಯಿಸಿಕೊಟ್ಟಿದ್ದೀರಿ. ಹೀಗಾಗಿ ಹಿಂದಿನ ಪಠ್ಯದ ವಿಷಯಗಳ ಬಗ್ಗೆ ಅವನಿಗೆ ಕನ್ನಡದಲ್ಲಿಯೂ ಪರಿಚಯವಾಗಿದೆ. ಆದರೆ, ಇವುಗಳನ್ನು ಕನ್ನಡದಲ್ಲಿ ಓದುವುದು, ಬರೆಯುವುದರ ಬಗ್ಗೆ ಅವನ ಸಾಮರ್ಥ್ಯ ಹೆಚ್ಚಿಸಬೇಕಾಗುತ್ತದೆ. ಇದನ್ನು ಮಾಡುವುದು ಕಷ್ಟವೇನಲ್ಲ ಅನಿಸುತ್ತದೆ. ನಿಮ್ಮ ಹುಡುಗನಿಗೆ ತರಗತಿಯಲ್ಲಿ ಕಲಿಸಿದ ವಿಷಯಗಳನ್ನು ಗ್ರಹಿಸಿಕೊಳ್ಳುವ ರೀತಿಯನ್ನು ಪರಿಚಯಿಸಿ ಕೊಡಬೇಕಾಗುತ್ತದೆ. ಶಿಕ್ಷಕರ ನೆರವಿನಿಂದ ಇದನ್ನು ಗಳಿಸಿಕೊಳ್ಳಬಹುದು. ತರಗತಿಯಲ್ಲಿ ಕಲಿಸಿದ ವಿಷಯಗಳನ್ನು ಅಭ್ಯಾಸ ಮಾಡಬೇಕಾಗುತ್ತದೆ. ಆರಂಭದಲ್ಲಿ ಇದು ಕಷ್ಟವೆನಿಸಿದರೂ ಕ್ರಮೇಣ ತರಗತಿಯಲ್ಲಿ ಹೇಳಿಕೊಡುವ ಕ್ರಮಕ್ಕೆ ಹೊಂದಿಕೊಳ್ಳಬಹುದು ಎಂಬ ವಿಶ್ವಾಸ ಅವನಲ್ಲಿ ಮೂಡಿಸಬೇಕು. ಇದರೊಂದಿಗೆ ಶಿಕ್ಷಕರ ನೆರವು, ಮನೆಯಲ್ಲಿ ಸಿಗುವ ಪ್ರೋತ್ಸಾಹ ಅವನ ಕಲಿಕೆಯ ಮಟ್ಟವನ್ನು ಹೆಚ್ಚಿಸುವುದರಲ್ಲಿ ಸಂದೇಹವಿಲ್ಲ. ಕೆಲವು ವಿಷಯಗಳು ಇಂಗ್ಲಿಷ್ ಭಾಷೆಯಲ್ಲಿಯೂ ಇರುವುದರಿಂದ ಈಗಾಗಲೇ ಪರಿಚಯವಾಗಿರುವ ವಿಷಯಗಳು ಸುಲಭವಾಗಿ ನೆರವಿಗೆ ಬರುತ್ತದೆ. ಆದುದರಿಂದ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಮುಂದುವರೆಸುವುದರಿಂದ ಕಲಿಕೆಗೆ ಅಡ್ಡಿ ಉಂಟಾಗದು.

▶▶ ಎಂಜಿನಿಯರಿಂಗ್ ಪದವೀಧರಳಾದ ನನ್ನ ಒಬ್ಬಳೇ ಮಗಳಿಗೆ ಸುಮಾರು ಹತ್ತು ತಿಂಗಳುಗಳ ಹಿಂದೆ ಮದುವೆ ಮಾಡಿದೆವು. ಅವಳಿಗೆ ಈಗ 25ವಯಸ್ಸು. ಈ ಸಂಬಂಧ ನಮ್ಮ ಕುಟುಂಬಕ್ಕೆ ಹತ್ತಿರದವರ ಮೂಲಕವೇ ಬಂದಿದ್ದು. ನನ್ನ ಅಳಿಯ ಎಂಬಿಎ ಪದವೀಧರ. ಈಗ ಪಿಎಚ್‌ಡಿ ಮಾಡುತ್ತಿದ್ದಾನೆ. ಅವನ ತಂದೆ ಮತ್ತು ತಾಯಿ ಬ್ಯಾಂಕ್ ನೌಕರಿಯಲ್ಲಿದ್ದವರು, ಈಗ ನಿವೃತ್ತಿ ಪಡೆದಿದ್ದಾರೆ. ನಮ್ಮ ಮಗಳ ಮನಸ್ಸಿಗೆ ಕಳೆದ ಐದಾರು ತಿಂಗಳುಗಳಿಂದ ತುಂಬಾ ಇರಸು ಮುರಸು ಉಂಟು ಮಾಡುವಂತಹ ಪ್ರಸಂಗಗಳು ಗಂಡನಿಂದಲೇ ಆಗುತ್ತಿವೆ. ಇದು ಹೀಗೆಯೇ ಮುಂದುವರೆದರೆ ಅವನೊಂದಿಗೆ ಸಂಸಾರ ನಡೆಸುವುದು ಅಸಾಧ್ಯವೆನ್ನುತ್ತಾಳೆ. ಅವಳು ಮಾಡುವ ಕೆಲಸ, ಮಾತಿನ ಬಗ್ಗೆ ತುಂಬಾ ಟೀಕೆ ಅಪಮಾನ, ಅಪಹಾಸ್ಯ ಮಾಡುವುದು. ಒಮ್ಮೊಮ್ಮೆ ಎಲ್ಲರ ಎದುರಿನಲ್ಲೂ ಹಗುರವಾಗಿ ಮಾತಾಡಿಬಿಡುವುದು. ಒಟ್ಟಿನಲ್ಲಿ ಪ್ರತಿ ವಿಷಯದ ಬಗ್ಗೆ ಕಿರಿಕಿರಿ ಉಂಟುಮಾಡುವ ಸ್ವಭಾವ ಅವನದು. ಅತ್ತೆ, ಮಾವನ ಗಮನಕ್ಕೆ ಈ ವಿಷಯ ತರಬೇಕೋ ಬೇಡವೋ ಎನ್ನುವುದು ಗೊತ್ತಾಗುತ್ತಿಲ್ಲ ಎನ್ನುತ್ತಾಳೆ. ನಮ್ಮ ಮಗಳು ತುಂಬಾ ಸೂಕ್ಷ್ಮ, ಮೃದು ಸ್ವಭಾವದವಳು. ಹೊಂದಿಕೊಂಡು ಹೋಗುವ ಗುಣ ಅವಳಲ್ಲಿದೆ. ಆದರೆ ಅಪಹಾಸ್ಯ, ಹಿಂಸೆ ಸಹಿಸಿಕೊಳ್ಳುವಷ್ಟು ಶಕ್ತಿ ಅವಳಲ್ಲಿ ಇಲ್ಲ. ಇಂತಹ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎನ್ನುವುದನ್ನು ತಿಳಿಸಲಾರದ ಸ್ಥಿತಿಯಲ್ಲಿ ನಾವಿದ್ದೇವೆ. ದಯಮಾಡಿ ಸಲಹೆ ನೀಡಿ.

-ರಾಜಾರಾಂ, ಬೆಂಗಳೂರು

ಹೊಸ ಸಂಬಂಧಗಳಲ್ಲಿ ಇಂತಹ ವರ್ತನೆ ಎದ್ದು ಕಾಣಿಸಿಕೊಳ್ಳುವುದು ಖಂಡಿತ ದುರದೃಷ್ಟಕರ. ಅದರಲ್ಲೂ ವಿದ್ಯಾವಂತರು ಬಾಳಸಾಂಗತ್ಯವನ್ನು ಒರಟುತನ, ಹಿಂಸೆ, ದಬ್ಬಾಳಿಕೆಯ ಮೂಲಕ ನಡೆಸಿಕೊಳ್ಳುವುದು ಅಪಮಾನ. ಏನೇ ಆಗಲಿ ಅವಸರದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಬೇಡ. ಹಾಗೆಂದು ಹಿಂಸೆ, ಅಪಮಾನಗಳನ್ನು ಸಹಿಸಿಕೊಳ್ಳಬೇಕೆಂದಿಲ್ಲ. ಇಂತಹದೊಂದು ಸನ್ನಿವೇಶದಲ್ಲಿ ಮೊದಲು ನಿಮ್ಮ ಬೀಗರಿಗೆ ಚೆನ್ನಾಗಿ ಪರಿಚಯವಿರುವವರ ಮೂಲಕ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಕ್ಕೆ ತರುವ ಅಗತ್ಯವಿದೆ. ನಂತರದಲ್ಲಿ ನಿಮ್ಮ ಮಗಳು ತನ್ನ ಸ್ವಭಾವದಲ್ಲಿರುವ ಶಕ್ತಿಯನ್ನು ಬಳಸಿಕೊಂಡು ಗಂಡನಿಗೆ ವಿವೇಚನೆ ಹೇಳುವುದು ಅತ್ಯಗತ್ಯ. ಮಾನಸಿಕ ಹಿಂಸೆ ತಡೆಗಟ್ಟಬಹುದಾದ ಅವಕಾಶ ಕಲ್ಪಿಸಿಕೊಳ್ಳುವ ಅಗತ್ಯವೂ ಇದೆ. ಅವನಿಗೆ ಆಪ್ತರಾದವರ ಮೂಲಕ ತಿಳಿವಳಿಕೆ ಕೊಡಿಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಇದಲ್ಲದೆ ಅವನ ವ್ಯಕ್ತಿತ್ವ, ಅಭ್ಯಾಸಗಳ ಕಡೆ ಕೊಂಚ ಗಮನ ಕೊಡಬೇಕಾಗುತ್ತದೆ. ಇಂತಹದೊಂದು ವಿಷಯದ ಬಗ್ಗೆ ತಜ್ಞರ ನೆರವು ಪಡೆದುಕೊಳ್ಳುವುದು ಮುಖ್ಯ. ಆದರೆ, ಅದನ್ನು ಅಷ್ಟೊಂದು ಸಲೀಸಾಗಿ ಮಾಡಲು ಸಾಧ್ಯವಿಲ್ಲ. ಆಪ್ತರು, ಹಿತೈಷಿಗಳ ನೆರವು ಪಡೆಯಬೇಕಾಗುತ್ತದೆ. ಸೂಕ್ತ ಸಮಯದಲ್ಲಿ ಅತ್ತೆ, ಮಾವ, ಅಥವಾ ಮನೆಯ ಹಿರಿಯರ ಪರಿಸ್ಥಿತಿ ಏನೆನ್ನುವುದನ್ನು ತಿಳಿಸಲೇ ಬೇಕಾಗುತ್ತದೆ. ನೀವು ಸಹ ನಿಮ್ಮ ಅಳಿಯನೊಂದಿಗೆ ಈ ವಿಷಯದ ಬಗ್ಗೆ ಮಾತಾಡಬೇಕು. ಕೋಪ, ತಾಪಗಳ ಮೂಲಕ ವಿಷಯದ ಪ್ರಸ್ತಾಪವಾಗುವುದು ಬೇಡ. ಸಂಯಮದ ಮೂಲಕವೇ ಅವನಲ್ಲಿ ತಿಳಿವಳಿಕೆ ಮೂಡಿಸುವ ಅಗತ್ಯವಿದೆ. ಮಾನಸಿಕ ಗೊಂದಲ, ಕ್ಲೇಷಗಳು ಇಂತಹದೊಂದು ವರ್ತನೆಗೆ ಕಾರಣ ಎನ್ನುವುದನ್ನು ಮರೆಮಾಚುವಂತಿಲ್ಲ.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್** 9880937122